ರಾಜ ತಾರಾಪೀಡ–ವಿಲಾಸವತಿ ಮಗ ಚಂದ್ರಾಪೀಡ, ಮಂತ್ರಿ ಶುಕನಾಸ–ಮನೋರಮೆ ಮಗ ವೈಶಂಪಾಯನ. ರಾಜ್ಯಾಭಿಷೇಕವಾದ ಬಳಿಕ ಚಂದ್ರಾಪೀಡ ದಿಗ್ವಿಜಯವನ್ನು ಮುಗಿಸಿ, ಒಂದು ದಿನ ಬೇಟೆಯಾಡುತ್ತ ಕಿನ್ನರ ಮಿಥುನವನ್ನು ಬೆನ್ನಟ್ಟಿ ದಣಿದು, ಅಚ್ಛೋದ ಸರೋವರದ ಬಳಿ ವಿಶ್ರಮಿಸುತ್ತಾನೆ. ಆಗ ದೂರದಿಂದ ಕೇಳಿ ಬಂದ ಗಾನವನ್ನು ಅನುಸರಿಸಿ ಹೋದಾಗ, ತಪೋನಿರತ ಕನ್ಯೆ ಕಾಣುತ್ತಾಳೆ. ಅವಳಿಂದ ಆತಿಥ್ಯವನ್ನು ಸ್ವೀಕರಿಸಿದ ಚಂದ್ರಾಪೀಡ, ಆಕೆಯ ವೃತ್ತಾಂತವನ್ನು ಕೇಳುತ್ತಾನೆ. ಮುಂದಿನದು ಶ್ವೇತಕೇತು ಮುನಿಯ ಮಗ ಪುಂಡರೀಕ–ಮಹಾಶ್ವೇತೆಯರ ಸಮಾಗಮದ ಕತೆ. ಸ್ನಾನಕ್ಕಾಗಿ ತಾಯಿಯೊಡನೆ ಅಚ್ಛೋದ ಸರೋವರಕ್ಕೆ ಬರುತ್ತಿರುವ ಮಹಾಶ್ವೇತೆ, ಪುಂಡರಿಕ ಪರಸ್ಪರ ಮೋಹಪರವಶರಾಗುವರು:



ಎಳಸುತ್ತಿರ್ದಪೆಪುಷ್ಪಮಂಜರಿಗೆ ಕೊಳ್ಳೀಸುತ್ತಿದೇಕೆಂದು ಸಂ
ಚಳಿಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳೆಂ
ದಳಿಮಾಲಾರವದಿಂದೆ ಪೇಟ್ವ ತೆಱದಿಂ ಮತ್ಕರ್ಣದೊಳ್ ತಾರಕೋ
ಜ್ವಳಮಂ ರಂಜಿಪ ಪುಷ್ಪಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ

ಮಹಾಶ್ವೇತೆ ಪುಂಡರೀಕನ ಕಿವಿಯಲ್ಲಿರುವ ಕುಸುಮಮಂಜರಿಗೆ ಎಳಸಿರುವುದನ್ನು ಗಮನಿಸಿ ಆತ ಅದನ್ನು ಅವಳ ಕಿವಿಗೆ ತೊಡಿಸುವನು. ಸ್ಪರ್ಶ ಕಂಪನದಿಂದ ಆತನ ಕೈಯಲ್ಲಿದ್ದ ಜಪಸರ ನೆಲಕ್ಕೆ ಬೀಳುವಷ್ಟರಲ್ಲಿ, ಮಹಾಶ್ವೇತೆ ಅದನ್ನು ಹಿಡಿದು ಕೊರಳಿಗೆ ಹಾಕಿಕೊಂಡು, ಆತನ ತೋಳ ತೆಕ್ಕೆಯಲ್ಲಿರುವಂತೆ ಆನಂದವನ್ನು ಅನುಭವಿಸುತ್ತಾಳೆ. 'ಸೋಲ್ತೆಂ ಕೂಡುನೀನೆನ್ನೊಳ್' ಎನ್ನುವಷ್ಟು ಕಾಮಪರವಶನಾಗಿರುವ ಪುಂಡರೀಕನನ್ನು ಕಪಿಂಜಲ ಎಚ್ಚರಿಸುತ್ತಾನೆ. ಆಗ 'ಕುಡು ಚಪಳೆ ಜಪದ ಮಣಿಯಂ, ಕುಡದಿನ್ನೊಂದಡಿಯನಪ್ಪೊಡಂ ಪೋಗದಿರ್' ಎಂದಾಗ, ಬದಲಾಗಿ ಕೊರಳಿನ ಹಾರವನ್ನು ನೀಡುತ್ತಾಳೆ. ಅದನ್ನು ಜಪಸರವೆಂದೇ ತೆಗೆದುಕೊಳ್ಳುತ್ತಾನೆ. ಬಳಿಕ ಅಗಲಿಕೆ, ವಿರಹ ವೇದನೆಯಿಂದ ಇಬ್ಬರೂ ಪರಿತಪಿಸುತ್ತಾರೆ. ದಿನಗಳು ಕಳೆದಂತೆ ಕಪಿಂಜಲ ಬಂದು, ತನ್ನ ಪ್ರಾಣಮಿತ್ರನನ್ನು ಕಾಪಾಡುವಂತೆ ಬೇಡುತ್ತಾನೆ; ತರಳಿಕೆಯೊಂದಿಗೆ ಪುಂಡರೀಕನಿರುವಲ್ಲಿಗೆ ಹೋದಾಗ, ಆತ ಮೃತನಾಗಿರುತ್ತಾನೆ. ಸಹಗಮನಕ್ಕೆ ಸಿದ್ಧಳಾದವಳನ್ನು ದಿವ್ಯಪುರುಷನೊಬ್ಬ ತಡೆದು, 'ಬಗೆಗೆಟ್ಟು ಸಾವ ಬಗೆಯಂ, ಮಗಳೆ ಮಹಾಶ್ವೇತೆ ಬಗೆಯದಿರ್ ಕೂಡುವೆ ನೀಂ ಮುಗುಱಿಯುಮೀತನನ್' ಎಂದು ಪುಂಡರೀಕನ ದೇಹವನ್ನು ಚಂದ್ರಲೋಕದತ್ತ ತೆಗೆದುಕೊಂಡು ಹೋಗುತ್ತಾನೆ. ಅಲ್ಲಿಂದ ಆತನ ನಾರುಮಡಿಯನ್ನು ಉಟ್ಟು, ಅವನ ಜಪಸರ, ಕಮಂಡಲವನ್ನು ಹಿಡಿದು, ವ್ರತದಲ್ಲಿ ನಿರತಳಾಗುವಳು. ಮಹಾಶ್ವೇತೆಯ ವೃತ್ತಾಂತವನ್ನೆಲ್ಲಾ ಕೇಳಿದ ಚಂದ್ರಾಪೀಡ ಹೀಗೆ ನುಡಿಯುತ್ತಾನೆ: